ಉಪಾಧ್ಯಕ್ಷರು : ಮಂಡಿಸಲಾಯಿತು.

4. ಪ್ರಕಟಣೆ

ಅಧ್ಯಕ್ಷರು : ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆ ನಿಯಮ 103ರ ಮೇರೆಗೆ ದಿನಾಂಕ 11ನೇ ನವೆಂಬರ್ 1998ರಂದು ಕರ್ನಾಟಕ ವಿಧಾನ ಪರಿಷತ್ತು ತುಂಗಭದ್ರಾ ಸಕ್ಕರೆ, ದೇವಿ ಸಕ್ಕರೆ ನಿಯಮಿತ ಉದ್ಯಮದ ಆರ್ಜನೆ ಮತ್ತು ವರ್ಗಾವಣೆ ವಿಧೇಯಕ 1998 ಯಾವುದೇ ತಿದ್ದುಪಡಿ ಇಲ್ಲದೆ ಅಂಗೀಕರಿಸಿತು. ಆದ್ದರಿಂದ ಸದರಿ ವಿಧೇಯಕಕ್ಕೆ ವಿಧಾನಸಭೆಯ ಸಹಮತಿಯನ್ನು ನೀಡಬೇಕೆಂದು ಈ ಮೂಲಕ ಕೋರುತ್ತೇನೆ.

4. ಸಭೆಯ ಮುಂದಿಡಲಾದ ಕಾಗದ ಪತ್ರಗಳು

I ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು): ಸನ್ಮಾನ್ಯ ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿ) ಅವರ ಪರವಾಗಿ :

1956ರ ಕರ್ನಾಟಕ ಸಚಿವರುಗಳ ವೇತನ ಹಾಗೂ ಭತ್ಯೆಗಳ 12(2ಎ)(ಎ) ಪ್ರಕರಣದ ಮೇರೆಗೆ;

1. ಮಾನ್ಯ ವಸತಿ ಸಚಿವರಾದ ಶ್ರೀ ಹೆಚ್.ಡಿ.ರೇವಣ್ಣ ಅವರು ದಿನಾಂಕ 2-8-1998ರಿಂದ 23-8-1998ರವರೆಗೆ ಯು.ಕೆ, ಹಾಲೆಂಡ್, ಯು.ಎಸ್.ಎ., ಡೆನ್ಮಾರ್ಕ್ ಮತ್ತು ಫ್ರಾನ್ಸ್‌ಗಳಿಗೆ ಭೇಟಿ ನೀಡಿರುವ ಸಂಬಂಧದಲ್ಲಿ ದಿನಾಂಕ 3-8-1998ರಂದು ಹೊರಡಿಸಲಾದ ಡಿಪಿಎಆರ್ 81 ಜಿಎಎಂ 98ನೇ ಕ್ರಮಾಂಕದ ಆದೇಶ;

2. ಮಾನ್ಯ ಉಪ ಮುಖ್ಯ ಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ, ಕೃಷಿ ಮಂತ್ರಿಗಳಾದ ಶ್ರೀ ಸಿ.ಬೈರೇಗೌಡ, ಸಾರಿಗೆ ಮಂತ್ರಿಗಳಾದ ಶ್ರೀ ಪಿ.ಜಿ.ಆರ್.ಸಿಂಧ್ಯ, ಗ್ರಾಮಾಣಾಭವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿಗಳಾದ ಶ್ರೀ ಎಂ.ಪಿ.ಪ್ರಕಾಶ್, ಭಾರಿ ನೀರಾವರಿ ಮಂತ್ರಿಗಳಾದ ಕೆ.ಎನ್.ನಾಗೇಗೌಡ ಇವರುಗಳು ದಿನಾಂಕ 24-9-1998ರಿಂದ 7-10-1998ರವರೆಗೆ ಥೈಲ್ಯಾಂಡ್, ಮಲೇಷಿಯಾ, ಸಿಂಗಪೂರ್ ಮತ್ತು